**ಸಿ. ಸಿ. ನಂ. 1339/2021**

**ಡಿ ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕ:** 16-12-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟಿ ಸವಾಲು: ಪಿರ್ಯಾದುದಾರರ ಪರ ಶ್ರೀ ಎಂ.ಜಿ.ಆರ್ ವಕೀಲರಿಂದ</u>**

ನಾನು ಹುಟ್ಟಿದಾಗಿನಿಂದಲೂ ಬೆಂಗಳೂರಿನಲ್ಲಿ ವಾಸವಿರುತ್ತೇನೆ. ನಾನು ಬೆಂಗಳೂರಿನ ರಾಜರಾಜೇಶ್ವರಿ ನಗರದ ಗಿರಿಧಾಮ ಲೇಔಟ್ ನಲ್ಲಿರುವ ಮನೆಯಲ್ಲಿ ವಾಸವಿರುತ್ತೇನೆ. ನಾನು ವಾಸವಿರುವ ಮನೆಯ ಉತ್ತರಕ್ಕೆ ನಾನು ಪಿರ್ಯಾದುದಾರರಿಂದ ಖರೀದಿಸಿದ ನಿವೇಶನ ಇರುತ್ತದೆ. ಖರೀದಿ ಪತ್ರ ನನ್ನ ಹೆಸರಿನಲ್ಲಿ ಮಾತ್ರ ನೊಂದಣಿ ಆಗಿರುತ್ತದೆ. ಖರೀದಿ ಮಾತುಕತೆ ಖರೀದಿ ಪತ್ರ ಆಗುವುದಕ್ಕೂ **2** ತಿಂಗಳು ಮೊದಲು ಆಗಿತ್ತು. ನಿಡಿ: **8** ರ ಕರಾರು ಪತ್ರ ಆದಾಗ ಪಿರ್ಯಾದುದಾರರ ಕಡೆಯಿಂದ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಬ್ಯಾಂಕ್ ಸಾಲ ಮಾಡಿಸಲು ಪಡೆದಿದ್ದೆ. ಸದರಿ ದಾಖಲೆಗಳು ಪಿರ್ಯಾದುದಾರರ ಹೆಸರಿನಲ್ಲಿ ಇದ್ದ ಖರೀದಿ ಪತ್ರ, ಖಾತಾ ನಕಲು, ತೆರಿಗೆ ಪಾವತಿಸಿದ ರಸೀದಿಗಳು ಅಂದರೆ ಸರಿ . ಸಾಕ್ಷಿ ಮುಂದುವರೆದು ಅವುಗಳ ನಕಲನ್ನು ನಾನು ಪಡೆದಿದ್ದೆ ಎಂದು ನುಡಿಯುತ್ತಾರೆ.

ನಾನು ಖರೀದಿಸಿದ್ದ ಆಸ್ತಿ **60X40** ಅಂದರೆ **2400** ಚದರ ಅಡಿ ವಿಸ್ತೀರ್ಣದ್ದು ಅಂದರೆ ಸರಿ . ಸದರಿ ನಿವೇಶನಕ್ಕೆ ಒಂದು ಚದರ ಅಡಿಗೆ ರೂ. **3,000/-** ಗಳಂತೆ ಒಟ್ಟು **72,00,000/-** ಗಳಿಗೆ ಖರೀದಿ ವ್ಯವಹಾರ ಆಗಿತ್ತು ಅಂದರೆ ಸರಿ . ನಾನು ಬ್ಯಾಂಕಿನಿಂದ ರೂ. **50,00,000/-** ಗಳನ್ನು ಸಾಲವಾಗಿ ಪಡೆದಿದ್ದೆ. ಉಳಿದ ರೂ. **22,00,000/-** ನನ್ನ ಬಳಿ ಇತ್ತು. ಆ ಹಣ ನನ್ನ ಬ್ಯಾಂಕ್ ಖಾತೆಯಲ್ಲಿಯೇ ಇತ್ತು. ಸದರಿ ಹಣ ನನ್ನ ಬ್ಯಾಂಕ್ ಖಾತೆಯಲ್ಲಿ ಇತ್ತು ಎಂದು ತೋರಿಸಲು ಖಾತೆಯ

ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಿರುತ್ತೇನೆ. ಸದರಿ ಸ್ಟೇಟ್ ಮೆಂಟ್ ನಿಡಿಃ 10 ರಲ್ಲಿ ಇರುತ್ತದೆ. ನಿಡಿಃ 10 ರ ಪ್ರಕಾರ ನನ್ನ ಬ್ಯಾಂಕ್ ಖಾತೆಯಲ್ಲಿ ರೂ. 22,00,000/- ಇರುವ ಬಗ್ಗೆ ಕಂಡುಬರುವುದಿಲ್ಲ ಅಂದರೆ ಸರಿಯಲ್ಲ. ನಿವೇಶನ ಖರಿಲಸಿದಿದಾಗ ರಬ್ಯಾಂಕ್ ಖಾತೆಯಲ್ಲಿ ರೂ. 22,00,000/- ಇತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಿರ್ಯಾದುದಾರರ ಖಾತೆಯಿಂದ ನನ್ನ ಬ್ಯಾಂಕ್ ಖಾತೆಗೆ ರೂ. 11,00,000/- ಲಕ್ಷ ವರ್ಗಾವಣೆ ಆಗಿದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಹೆಂಡತಿಯ ಬ್ಯಾಂಕ್ ಖಾತೆಗೆ ವರ್ಗಾವಣೆ ಆಗಿದೆ ಎಂದು ನುಡಿಯುತ್ತಾರೆ. ನನ್ನ ಹೇಳಿಕೆಯ ಮೇರೆಗೆ ಪಿರ್ಯಾದುದಾರ ಸದರಿ ಹಣವನ್ನು ನನ್ನ ಹೆಂಡತಿಯ ಖಾತೆಗೆ ವರ್ಗಾಯಿಸಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೇ ವರ್ಗಾಯಿಸಿರುತ್ತಾರೆ ಎಂದು ನುಡಿಯುತ್ತಾರೆ.

ಸಿಸಿ 265/2021 ರಲ್ಲಿನ ಪಿರ್ಯಾದುದಾರರ ವಿಶ್ವನಾಥ ರವರ ಬ್ಯಾಂಕ್ ಖಾತೆಯಿಂದ ನನ್ನ ಹೆಂಡತಿಯ ಬ್ಯಾಂಕ್ ಖಾತೆಗೆ ರೂ. 11,00,000/- ವರ್ಗಾವಣೆ ಆಗಿತ್ತು ಅಂದೆರ ಸರಿ . ಸಾಕ್ಷಿ ಮುಂದುವರೆದು ಪಿರ್ಯಾದುದಾರ ಮತ್ತು ವಿಶ್ವನಾಥ ಪಾಲುದಾರರಾಗಿದ್ದರಿಂದ ಆ ರೀತಿ ಹಣ ವರ್ಗಾವಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿಃ 3 ರಲ್ಲಿರುವ ಚೆಕ್ ಮತ್ತು ಅದರಲ್ಲಿನ ಸಹಿ ನನ್ನದೇ ಅಂದರೆ ಸರಿ . ನಿಪಿಃ 1 ರಲ್ಲಿರುವ ನಿಪಿಃ 1(ಎ) ಮತ್ತು 1(ಬಿ) ಸಹಿಗಳು ನನ್ನ ಮತ್ತು ನನ್ನ ಹೆಂಡತಿಯ ಸಹಿಗಳು ಅಂದೆರ ಸರಿ . ಸಾಕ್ಷಿ ಮಂದುವರೆದು ನಾವು ಸಹಿ ಮಾಡಿದಾಗ ಬರವಣಿಗೆಗಳು ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿಃ 1 ರ ಪ್ರಾಮಿಸರಿ ನೋಟ್ ಅನ್ನು ನಾವುಗಳೇ ಬರ್ತಿ ಮಾಡಿ ಸಹಿಮಾಡಿ

ಪಿರ್ಯಾದುದಾರರಿಗೆ ಕೊಟ್ಟಿರುತ್ತೇವೆ ಅಂದರೆ ಸರಿಯಲ್ಲ. ನಿಪಿಃ 2 ರಲ್ಲಿರುವ ಸಹಿ ನನ್ನದೇ ಅಂದರೆ ಸರಿ . ಸಾಕ್ಷಿ ಮುಂದುವರೆದು ಸದರಿ ದಾಖಲೆ ಸಹ ಖಾಲಿ ಇತ್ತು ಎಂದು ನುಡಿಯುತ್ತಾರೆ. ನಿಪಿಃ 2 ರ ದಾಖಲೆ ಸಹ ನಾನೇ ಬರೆಯಿಸಿ ಸಹಿ ಮಾಡಿ ಪಿರ್ಯಾದುದಾರರಿಗೆ ಕೊಟ್ಟು ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಬೆಂಗಳೂರಿನ ನ್ಯಾಯಾಲಯದಲ್ಲಿ ಪಿಸಿ **983/2022** ರಲ್ಲಿನ ಖಾಸಗಿ ಪಿರ್ಯಾದನ್ನು ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೆ. ಸದರಿ ಪಿರ್ಯಾದುನಲ್ಲಿನ ವಿಷಯಗಳು ನನಗೆ ಚೆನ್ನಾಗಿ ಗೊತ್ತು ಅಂದರೆ ಸರಿ . ಸದರಿ ಪಿರ್ಯಾದುನಲ್ಲಿನ ಪ್ರತಿಯೊಂದು ಖಂಡಿಕೆಯಲ್ಲಿನ ಅಂಶಗಳು ಸತ್ಯದಿಂದ ಕೂಡಿರುತ್ತವೆ. ಸದರಿ ಪ್ರಕರಣ ಒಂದು ಬಾರಿ ವಜಾ ಆಗಿತ್ತು ಅಂದರೆ ಸರಿ . ಸಾಕ್ಷಿ ಮುಂದುವರೆದು ನನ್ನ ವಕೀಲರಿಗೆ ಅಪಘಾತವಾಗಿ ಪ್ರಕರಣ ನಡೆಸಿದಿದ್ದರಿಂದ ವಜಾ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ವಜಾ ಆದ ಆದೇಶವನ್ನು ಪ್ರಶ್ನಿಸಿ ರಿವಿಜನ್ ಅರ್ಜಿ **699/2023** ಅನ್ನು ಸಲ್ಲಿಸಿದ್ದೆ ಅಂದರೆ ಸರಿ. ಸದರಿ ರಿವಿಜನ್ ಅರ್ಜಿಯಲ್ಲಿನ ಪ್ರತಿಯೊಂದು ಅಂಶ ನನ್ನ ಮಾಹಿತಿ ಇರುತ್ತದೆ ಮತ್ತು ಅದು ಸತ್ಯದಿಂದ ಕೂಡಿರುತ್ತದೆ. ಸದರಿ ಪ್ರಕರಣದಲ್ಲಿ ಆರೋಪಿತರಿಗೆ ಸಮನ್ಸ್ ತಲುಪಿ ಈಗ ಅವರ ವಕೀಲರ ಮೂಲಕ ಹಾಜರಾಗಿರುತ್ತಾರೆ. ಹಾಲಿ ಆ ಪ್ರಕರಣದಲ್ಲಿ ಹಿಯರಿಂಗ್ ನಡೆಯುತ್ತಿದೆ.

ಅಸಲು ದಾವೆ ಸಂಖ್ಯೆ **26143/2020** ದಾವೆಯಲ್ಲಿ ನಾನು ಮೊದಲಿಂದಲೂ ಪಕ್ಷಗಾರನಾಗಿರಲಿಲ್ಲ. ಸದರಿ ದಾವೆ ಪಿರ್ಯಾದುದಾರರಿಂದ ನಾನು ಖರೀದಿಸಿರುವ ನಿವೇಶನ ಅಲ್ಲದೇ ಅದರ ಪಕ್ಕದಲ್ಲಿನ ನಮ್ಮ ಮನೆಗೆ ಸಂಬಂಧಿಸಿ ಸಹ ಇರುತ್ತದೆ

ಅಂದರೆ ಸರಿಯಲ್ಲ. ನಾನು ಖರೀದಿಸಿದ ನಿವೇಶನ ಸಂಖ್ಯೆ 120 ಇರುತ್ತದೆ. ನಮ್ಮ ಮನೆ ನಿವೇಶನ ಸಂಖ್ಯೆ 119/1 ಇರುತ್ತದೆ.

ನಾನು ಪಿರ್ಯಾದುದಾರರಿಂದ ನಿವೇಶನ ಖರೀದಿಸಿದ ನಂತರ ಮೇಲೆ ಹೇಳಿದ ದಾವೆ ದಾಖಲಾಗಿರುತ್ತದೆ. ನಾನು ನಿವೇಶನ ಖರೀದಿಸಿದ ಸಮಯದಲ್ಲಿ ಸದರಿ ನಿವೇಶನಕ್ಕೆ ಸಂಬಂದಿಸಿ ಯಾವುದೇ ರೀತಿಯ ವಿವಾದಗಳು ಇರಲಿಲ್ಲ ಅಂದರೆ ಸರಿಯಲ್ಲ. ಪಿರ್ಯಾದುದಾರರು Confirmation deed ಬರೆದುಕೊಡತಕ್ಕದ್ದು ಎಂದು ನಾವುಗಳು ಲಿಖಿತ ಕರಾರು ಪತ್ರವನ್ನು ಮಾಡಿಕೊಂಡಿಲ್ಲ. ನಿವೇಶನದ ಬಗ್ಗೆ ಯಾವುದೇ ವಿವಾದ ಇಲ್ಲದಿದ್ದ ಕಾರಣ Confirmation deed ಬರೆದುಕೊಡುವಂತೆ ಯಾವುದೇ ಮಾತುಕತೆ ಆಗಿರಲಿಲ್ಲ ಅಂದರೆ ಸರಿಯಲ್ಲ. Confirmation deed ಬರೆದುಕೊಡಲು ಪಿರ್ಯಾದುದಾರರು ಒಪ್ಪಿಕೊಂಡಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಕರಾರು ಪತ್ರ ಆದಾಗ ನಿವೇಶನಕ್ಕೆ ಸಂಬಂಧಿಸಿ ವ್ಯಾಜ್ಯ ಇರುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ಕಾರಾರು ಪತ್ರ ಆದ ಒಂದು ವಾರ -10 ದಿನಗಳಲ್ಲಿ ಸದರಿ ವ್ಯಾಜ್ಯ ಇರುವ ಬಗ್ಗೆ ಗೊತ್ತಾಯಿತು. ಕಾರಾರು ಪತ್ರ ಆದಾಗ ರೂ. 50,000/- ಗಳನ್ನು ಮುಂಗಡವಾಗಿ ಕೊಟ್ಟಿದ್ದೆ. ಸದರಿ ವ್ಯಾಜ್ಯ ಇರುವ ಬಗ್ಗೆ ಕರಾರು ಆದ ನಂತರ ಮತ್ತು ಖರೀದಿ ಪತ್ರ ಆಗುವ ಮೊದಲು ನನಗೆ ಗೊತ್ತಾದಾಗ ನಾನು ನೀಡಿದ್ದ ಮುಂಗಡ ಹಣವನ್ನು ಹಿಂತಿರುಗಿಸಿ ಕರಾರು ಪತ್ರ ರದ್ದು ಗೊಳಿಸುವಂತೆ ಪಿರ್ಯಾದುದಾರರಿಗೆ ಕೇಳಿಕೊಂಡಿದ್ದೆ. ಪಿರ್ಯಾದುದಾರರು Confirmation deed ಮಾಡಿಕೊಡುತ್ತೇನೆ, 4-5 ತಿಂಗಳು ಸಮಯ ಕೊಡಿ ಎಂದು ಹೇಳಿದ್ದರಿಂದ ಕರಾರನ್ನು ರದ್ದುಪಡಿಸಿಕೊಳ್ಳಲಿಲ್ಲ. ಕರಾರು ಪತ್ರ ರದ್ದು ಪಡಿಸಿಕೊಳ್ಳಲು

ನಾನಾಗಲೀ, ವಕೀಲರ ಮೂಲಕವಾಗಲೀ ಲಿಖಿತ ನೋಟಿಸ್ ನೀಡಿರುವುದಿಲ್ಲ. ಖರೀದಿ ಪತ್ರದಲ್ಲಿ Confirmation deed ಬರೆದುಕೊಡುವುದಾಗಿ ನಮೂದು ಇಲ್ಲ ಅಂದರೆ ಸರಿ . ನಾನು ಸಲ್ಲಿಸಿರುವ ಖಾಸಗಿ ಪಿರ್ಯಾದಿನಲ್ಲಾಗಲೀ ರಿವಿಜನ್ ಅರ್ಜಿಯಲ್ಲಾಗಲೀ Confirmation deed ಬಗ್ಗೆ ನಮೂದು ಮಾಡಿಲ್ಲ ಅಂದರೆ ಸರಿಯಲ್ಲ.

ಪಿರ್ಯಾದುದಾರರು Confirmation deed ಬರೆದುಕೊಡಲಿಲ್ಲ ಎಂಬ ಕಾರಣಕ್ಕೆ ಅವರು ಬರೆದುಕೊಟ್ಟಿರುವ ಖರೀದಿ ಪತ್ರ ರದ್ದು ಪಡಿಸಿ ನಾವು ಕೊಟ್ಟಿರುವ ಹಣ ಮರುಪಾವತಿ ಮಾಡುವಂತೆ ಪರಿಹಾರ ಕೋರಿ ನಾನು ಇಲ್ಲಿಯವರೆಗೂ ದಾವೆ ಸಲ್ಲಿಸಿದ್ದ ಅಂದರೆ ಸರಿ . ಸಾಕ್ಷಿ ಮಂದುವರೆದು ಅಂತಹ ಪ್ರಮೇಯವೇ ಬಂದಿಲ್ಲ ಎಂದು ನುಡಿಯುತ್ತಾರೆ. ನಾನು ಖರೀಸಿದಿದ ನಿವೇಶನಕ್ಕೆ ಕಂಪೌಂಡ್ ಹಾಕಿಕೊಂಡು ಸ್ವಾಧೀನ ಮಾಡಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ ಜಂಟಿಯಾಗಿ ಪಿರ್ಯಾದುದಾರರ ಬಳಿ ಸಾಲವಾಗಿ ಹಣ ಪಡೆದು ಈಗ ಸುಳ್ಳು ಕತೆ ಕಟ್ಟುತ್ತಿದ್ದೇವೆ ಅಂದರೆ ಸರಿಯಲ್ಲ. ನಾವು ರೂ. 50,00,000/- ಗಳನ್ನು ಪಡೆದು ಖರೀದಿ ಪತ್ರ ಬರೆದುಕೊಡುವಂತೆ ಪಿರ್ಯಾದುದಾರರಿರೆ ಹೇಳಿದಾಗ ಅವರು ಒಪ್ಪದಿದ್ದ ಕಾರಣ ಬೇರೆ ಕಡೆಯಿಂದ ಸಾಲ ಮಾಡಿ ತಂದು ಖರೀದಿ ಮಾಡಿ ನಂತರದಲ್ಲಿ ಪಿರ್ಯಾದುದಾರರ ಕಡೆಯಿಂದ ರೂ. 11,00,000/- ಗಳನ್ನು ಮತ್ತು ಮೇಲೆ ಹೇಚಳಿದ ವಿತ್ವನಾಥ ಕಡೆಯಿವರಿಂದ ರೂ. 11,00,000/-ಗಳನ್ನು ಸಾಲವಾಗಿ ಪಡೆದು ನಾವು ಮೊದಲು ಸಾಲ ಪಡೆದಿದ್ದವರಿಗೆ ಹಿಂತಿರುಗಿಸಿರುತ್ತೇವೆ ಅಂದರೆ ಸರಿಯಲ್ಲ. ಸದರಿ ಸ್ವತ್ತು 195 ಅಡಿ ಕಡಿಮೆ ಇರುತ್ತದೆ ಎಂದು ಸುಳ್ಳು ನುತಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಸಾಲ ಮರುಪಾವತಿ ಮಾಡಲೇಂದೇ ನಿಪಿಃ 3 ರ ಚೆಕ್ ಅನ್ನು ನೀಡಿ ಬೇಕಂತಲೇ ಬ್ಯಾಂಕಿಗೆ Stop payment ಸೂಚನೆ ನೀಡಿರುತ್ತೇನೆ ಅಂದರೆ ಸರಿಯಲ್ಲ.

ನಾನು ಪಿರ್ಯಾದುದಾರರಿಗೆ ವಕೀಲರ ಮುಖಾಂತರ ನೋಟಿಸ್ ನೀಡಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ನೋಟಿಸ್ ಪ್ರತಿ ನನ್ನ ಬಳಿ ಇರುತ್ತದೆ. ಸದರಿ ನೋಟಿಸ್ ಅನ್ನು ಪೋಸ್ಟ್ ಮೂಲಕ ಕಳುಹಿಸಲಾಗಿದೆ. ಯಾವ ರೀತಿಯ ಪೋಸ್ಟ್ ಮಾಡಲಾಗಿತ್ತು ಎಂದು ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ಸ್ವೀಕೃತ ಪತ್ರ ಇದೆ ಎಂದು ವಕೀಲರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಯಾವುದೇ ನೋಟಿಸ್ ನೀಡಿಲ್ಲ ಮತ್ತು ಅದಕ್ಕೆ ಸಂಬಂಧಿಸಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದೆರ ಸರಿಯಲ್ಲ. ಸಾಲದ ಮರುಪಾವತಿಗಾಗಿ ಚೆಕ್ ಅನ್ನು ಪಿರ್ಯಾದುದಾರರಿಗೆ ನೀಡಿ ಹಣ ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.